ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

3

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 3/1/21

# ತನಿಖೆಗೆ ರೈಲ್ವೆ ಪೊಲೀಸರ ಪರದಾಟ

- ಸರ್ಕಾರಕ್ಕೆ ನಿತ್ಯದ ಪ್ರಗತಿ ವರದಿ ಸಲ್ಲಿಕೆ
- ಸ್ಪೀಕರ್ ಸೂಚನೆ ಗಂಭೀರ ಪರಿಗಣನೆ

ಸಂ.ಕ.ಸಮಾಚಾರ ಬೆಂಗಳೂರು

ಮೇಲ್ಮನೆ ಉಪಸಭಾಪತಿ ಎಸ್.ಎಲ್.ಧರ್ಮೇಗೌಡ ಅವರು ಇತ್ತೀಚೆಗೆ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ವಾಸ್ತವಿಕ ಕಾರಣ ಪತ್ತೆಹಚ್ಚಲು ಪೊಲೀಸ್ ತನಿಖಾ ತಂಡ ಇನ್ನಿಲ್ಲದ ಕಸರತ್ತು ನಡೆಸಿದೆ ಎಂದು ತಿಳಿದುಬಂದಿದೆ.



ಚಿಕ್ಕಮಗಳೂರು ಮೂಲದ ಧರ್ಮೇಗೌಡ ಅವರು ಡಿಸೆಂಬರ್ 29 ರಂದು ಕಡೂರು ಬಳಿಯ ಗುಣಸಾಗರ ಎಂಬಲ್ಲಿ ವೇಗವಾಗಿ ಚಲಿಸುತ್ತಿದ್ದ ಹುಬ್ಬಳ್ಳಿ-ಬೆಂಗಳೂರು ಜನಶತಾಬ್ದಿ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಪ್ರಕರಣದ ತನಿಖೆಯ ನೇತೃತ್ವವನ್ನು ರೈಲ್ವೇ ಎಡಿಜಿಪಿ ಅರುಣ್ ಚಕ್ರವರ್ತಿ ವಹಿಸಿದ್ದು ಆತ್ಮಹತ್ಯೆಗೆ ಕಾರಣ ತಿಳಿಯಲು ಎಲ್ಲಾ ಆಯಾಮಗಳಲ್ಲಿಯೂ ತನಿಖೆ ನಡೆಸುತ್ತಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರೂ ಕೂಡ ಉನ್ನತ ಮಟ್ಟದ ಸ್ವತಂತ್ರ ಸಂಸ್ಥೆಯಿಂದ ತನಿಖೆ ನಡೆಸುವಂತೆ ಸರ್ಕಾರಕ್ಕೆ ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ಪೊಲೀಸರ ಮೇಲೆ ಸಹಜವಾಗಿಯೇ ಒತ್ತಡ ಹೆಚ್ಚಾಗಿದೆ. ಜೊತೆಗೆ ಪ್ರತಿನಿತ್ಯ ರೈಲ್ವೇ ಅಧಿಕಾರಿಗಳು ರಾಜ್ಯ ಸರ್ಕಾರಕ್ಕೆ ದೈನಂದಿನ ತನಿಖೆ ಪ್ರಗತಿಯ ವರದಿ ಸಲ್ಲಿಸಬೇಕಾಗಿದೆ. ಉಪ ಸಭಾಪತಿಯಾಗಿದ್ದ ಎಸ್.ಎಲ್. ಧರ್ಮೇಗೌಡ ಅವರ ಆತ್ಮಹತ್ಯೆಯನ್ನು ಅತಿಗಣ್ಯರ ಸಾವಿನ ಪ್ರಕರಣ ಎಂದು ಸರ್ಕಾರ ಪರಿಗಣಿಸಿದೆ. ಹಾಗಾಗಿ ಈ ಕುರಿತು ಕುರಿತು ಅಧಿಕಾರಿಗಳು ಸಿಎಂ ಯಡಿಯೂರಪ್ಪ ಹಾಗೂ ಗೃಹ ಸಚಿವಾಲಯಕ್ಕೆ ಪ್ರತಿನಿತ್ಯದ ವರದಿ ಸಲ್ಲಿಸಬೇಕಿದೆ. ಜೊತೆಗೆ ಧರ್ಮೇಗೌಡ ಅವರ ಆತ್ಮಹತ್ಯೆ ಪ್ರಕರಣದ ಕುರಿತಂತೆಯೂ ವಾಸ್ತವಿಕ ವರದಿಯನ್ನು ಸಲ್ಲಿಸಬೇಕಾಗಿದೆ.

ಇದೊಂದು ಅತಿಗಣ್ಯರ ಸಾವಿನ ಪ್ರಕರಣ ಆಗಿರುವ ಕಾರಣಕ್ಕೆ ಸಹಜವಾಗಿಯೇ ಒತ್ತಡ ಇದ್ದೇ ಇರುತ್ತದೆ. ತನಿಖಾ ತಂಡ ಸೂಕ್ಷ್ಮ ವಿಷಯಗಳನ್ನೂ ಕಲೆಹಾಕುತ್ತಿದ್ದು ತನಿಖೆಗೆ ಹೆಚ್ಚಿನ ಕಾಲಾವಕಾಶ ಬೇಕಾಗಬಹುದು ಎಂದು ಉನ್ನತ ಮೂಲಗಳು ತಿಳಿಸಿವೆ. ಧರ್ಮೇಗೌಡ ಅವರ ಮರಣೋತ್ತರ ಪರೀಕ್ಷೆಯ ವರದಿ ಪೂರ್ಣಪ್ರಮಾಣದಲ್ಲಿ ಇನ್ನೂ ಬಂದಿಲ್ಲ. ಅದಕ್ಕಾಗಿ ಕಾಯಲಾಗುತ್ತಿದೆ. ವರದಿ ಬಳಿಕ ಅಂತಿಮ ಕೆಲವು ನಿರ್ಧಾರ ಸಾಧ್ಯವಾಗಲಿದೆ ಎಂದು ಹೇಳಲಾಗಿದೆ. ಧರ್ಮೇಗೌಡ ಅವರು ಬರೆದಿಟ್ಟಿದ್ದರು ಎನ್ನಲಾದ ಡೆತ್‌ನೋಟ್ ಬಗ್ಗೆಯೂ ತನಿಖಾ ತಂಡ ಪರಾಮರ್ಶೆ ನಡೆಸಿದೆ. ರೈಲಿನ ಚಾಲಕನಿಂದಲೂ ಮಾಹಿತಿ ಪಡೆದಿದೆ. ಘಟನೆಗೆ ಮುನ್ನ ನೋಡಿದ್ದ ಸ್ಥಳೀಯ ಪ್ರತ್ಯಕ್ಷದರ್ಶಿಗಳನ್ನು ವಿಚಾರಣೆ ನಡೆಸಲಾಗಿದೆ. ಇವೆಲ್ಲದರ ನಡುವೆ ವಿಧಿವಿಜ್ಞಾನ ಪ್ರಯೋಗಾಲಯದ ಅಂಗಾಂಗ ವರದಿಯೂ ಬರಬೇಕಿದೆ. ಹಾಗಾಗಿ ತನಿಖಾತಂಡ ಯಾವುದೇ ತರಾತುರಿ ಮಾಡದೆ ವಸ್ತುನಿಷ್ಠ ತನಿಖೆಗೆ ಮುಂದಾಗಿದೆ. ಆದರೆ ನಿರ್ದಿಷ್ಟ ಕಾರಣ ಪತ್ತೆಗೆ ಮಾತ್ರ ತೀವ್ರ ಪ್ರಯತ್ನ ನಡೆಸಿದೆ. ಹಾಗಾಗಿ ಈ ಹಂತದಲ್ಲಿ ಆತ್ಮಹತ್ಯೆಗೆ ಇಂತಹದ್ದೇ ಕಾರಣವಿರಬಹುದು ಎಂದು ಹೇಳಲಾಗದು ಎನ್ನುವುದು ತನಿಖಾತಂಡದ ಉನ್ನತ ಮೂಲಗಳ ಮಾಹಿತಿಯಾಗಿದೆ.